ಬಹಳ ಟೈಟ್ ಆಗಿ ಹೊಟ್ಟೆ ಕೊರೆದಂತಾಗಿ ಉಸಿರುಬಿಗಿಯುತ್ತಿತ್ತು. ಇದೆಲ್ಲಾ ಹಗರಣ ಬೇಡವೆಂದು ಗುಪ್ತನಿಗೆ ಹೇಳಿ ಇಲಾಸ್ಟಿಕ್ ಇರುವ ಪಾಯಿಜಾಮದ ವ್ಯವಸ್ಥೆಯನ್ನೇ ಮಾಡಿಕೊಂಡರೂ ಒಮ್ಮೊಮ್ಮೆ ಹಣೆಬರಹ. ಹೊರಡುವಾಗ ಹುಡುಕಿದರೆ ಲಾಂಡ್ರಿಗೆ ಹೋದ ಬಟ್ಟೆಗಳಿನ್ನೂ ತವರಿಗೆ ಹೋದ ಹೆಂಡತಿಯಂತೆ ವಾಪಸ್ಸು ಮನೆಗೆ ಬರಲು ಮನಸ್ಸೇ ಮಾಡುತ್ತಿರಲಿಲ್ಲ. ಆಗ ಕೈಗೆ ಸಿಕ್ಕಿದ್ದೇ ಹಾಕಿಕೊಳ್ಳುವ ಅನಿವಾರ್ಯತೆ!

ರೆಸ್ಟ್ ರೂಮು ಸೇರಿ ಗಡಿಬಿಡಿಯಲ್ಲಿ ಶೆರಗುಣಿಕೆ ಬಿಚ್ಚಲು ತಡಕಾಡಿದ, ಬಲಬದಿಯ ದಾರ ಎಳೆಯಲು ಹೋಗಿ ಕುಣಿಕೆಯೊಳಗೊಂದು ಸುತ್ತು ಹೊಡೆದಿದ್ದ ಎಡಬದಿಯ ದಾರ ಪಸಕ್ಕನೆ ಜೋರಾಗಿ ಎಳೆದ ಹೊಡೆತಕ್ಕೆ ಶೆರಗುಣಿಕೆ ಹುಸಿಯಾದ ಗಂಟಾಗಿ ಹೋಯ್ತು.

ತಮ್ಮನ್ನು ಜ್ಞಾನಪಿಪಾಸುಗಳೆಂದು ಗುರುತಿಸಿಕೊಂಡ ಮಹನೀಯರೆಲ್ಲ ವೇದಿಕೆಯಲ್ಲಿ ಆಸೀನರಾಗಿರುವ ಈ ವ್ಯಕ್ತಿತ್ವ ವಿಕಸನದ ಸಭೆಯಿಂದ ಹೀಗೆ ಎದ್ದು ಹೊರನಡೆದ ತನ್ನ ಬಗ್ಗೆ ಎಂತೆಂತಹ ಸೊಲ್ಲೆದ್ದಿರಬಹುದು ಎಂಬ ತಳಮಳ ಒಂದೆಡೆಯಾದರೆ ತನಗೂ ರಾಘವನಿಗೂ ಹೊಯ್ದಕ್ಕಿ ಬೇಯುವುದಿಲ್ಲ ಎಂದು ಸಂಶಯಪಡುವವರಿಗೆ ಸಾಕ್ಷಿ ದೊರೆತಂತಾಗುತ್ತದೆ ಎಂಬ ಹಳಹಳಿ ಬೇರೆ! ಎರಡು ತಾಸಿನಿಂದ ಮೈಕನ್ನು ಹಿಡಿದು ಜೀವನದಲ್ಲಿ ಸಮಯದ ಮಹತ್ವ ಎಷ್ಟೆಂಬುದರ ಬಗ್ಗೆ ಕೊರೆಯುತ್ತಿದ್ದ ರಾಘವ ತನ್ನನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂದೇ ಹಠಾತ್ತನೆ ತನ್ನ ಭಾಷಣ ಮುಗಿಸಿದರೆ ಹುಸಿ ಗಂಟಿನಿಂದಾಗಿ ಜಲಬಾಧೆ ನೀಗಿಸಿಕೊಳ್ಳಲಾಗದೆ ಮಾತನಾಡಲು ಹೇಗೆ ವೇದಿಕೆ ಏರಲಿ ಎಂಬ ಗಾಬರಿ ಬೇರೆ!

ಹುಸಿ ಗಂಟನ್ನು ಕೆಣಕಿದಷ್ಟೂ ಅದು ನಿರ್ದಯವಾಗುತ್ತಲೇ ಹೋಯಿತು. ಜುಬ್ಬವನ್ನು ಹೇಗಾದರೂ ಸಹಿಸಿಕೊಂಡೇನು ಆದರೆ ಈ ಲಾಡಿಯಿರುವ ಪಾಯಿಜಾಮವನ್ನಲ್ಲ ಎಂದು ಮನಸ್ಸಿನಲ್ಲಿ ಶಪಿಸಿಯೇ ಶಪಿಸಿಕೊಂಡ ವಿಕ್ರಂ. ಪ್ರತಿಸಲವೂ ವೇದಿಕೆಯ ಮೇಲೆ ಪಠಿಸುತ್ತಿದ್ದ ಸಹನೆಯ ಮಂತ್ರ ಮರೆತು ಅರಚಿಕೊಳ್ಳುವಂತಾಗತೊಡಗಿತ್ತು.

ತಡಮಾಡದೆ ಎಂಟ್ರೆನ್ಸಿನಲ್ಲಿ ಯಾವ ಚಿಂತೆಯೂ ಇಲ್ಲದೆ ಅಥವಾ ಚಿಂತೆಯನ್ನು ತೋರಿಸಿಕೊಳ್ಳದೆ ತುಟಿಗೆ ಗಾಢ ಬಣ್ಣದ ಲಿಪ್‌ಸ್ಟಿಕ್ ಹಚ್ಚಿ, ಕುಚದ್ವಯಗಳು ಒತ್ತರಿಸಿ ಬರುವಂತಹ ಕೆಂಬಣ್ಣದ ಬಟ್ಟೆಯಲ್ಲಿ ಮಿಂಚುತ್ತಿದ್ದ ರಿಸೆಪ್ಷನಿಸ್ಟ್ ಬಳಿಸಾರಿ,

'ಇಫ್ಯೂ ಡೊಂಟ್ ಮೈಂಡ್, ಕೇನಾಯ್ ಬಾರೊವ್ ಅ ಸೀಸರ್ ಫ್ರಾಮ್ಯೂ ಪ್ಲೀಸ್' ಎಂದು ಒಳಗಿನ ಒತ್ತಡವನ್ನು ಕೈಲಾದಷ್ಟು ನಿಯಂತ್ರಿಸುತ್ತ ಕೇಳಿದ ವಿಕ್ರಂ.

ಕಣ್ಣು, ಕತ್ತು, ಮುಖವನ್ನು ಮಾತಿಗೆ ತಕ್ಕಂತೆ ಅಭಿನಯಿಸುತ್ತಾ ವಿಧೇಯಳಾಗಿ, 'ವೈನಾಟ್ ಸರ್' ಎಂದು ಕತ್ತರಿಯನ್ನು ಕೈಗಿಡುತ್ತಲೇ, 'ಎನಿ ಇಶ್ಯೂ ಸರ್, ಕೇನಾಯ್ ಹೆಲ್ಪ್ ಯೂ ಇನ್ ಎನಿವೇ ಸರ್?' ಎಂದು ಕೇಳಿದಳು ಮಿಸ್ಸೆಸ್ ರೋಸಿ.

ಒತ್ತರಿಸಿದ ಎದೆಯ ಮೇಲಿನ ಬ್ಯಾಡ್ಜ್ ಮೇಲೆ ಬರೆದಿತ್ತು ಅವಳ ಹೆಸರು.

ಸಲಾಂ ಹೊಡೆದಿಲ್ಲ ಎಂಬುದನ್ನು ಬಿಟ್ಟರೆ, ತುದಿಗೊಮ್ಮೆ ಬುಡಕ್ಕೊಮ್ಮೆ ಸರ್ ಎನ್ನುತ್ತಾ ಮಾತನಾಡುವ, ಸ್ವಲ್ಪವೂ ಬೇಸರಿಸದೆ ಇದೇ ನಯ ನಾಜೂಕಿನಿಂದ ದಿನವಿಡೀ ವರ್ತಿಸುವ ಇವಳು ಮನೆಯಲ್ಲಿಯೂ ಹೀಗೆಯೇ ಇರುತ್ತಾಳೆಯೇ ಎಂಬ ಸಂಶಯ ಆ ಕ್ಷಣದ ತೀವ್ರತೆಯಲ್ಲಿಯೂ ವಿಕ್ರಮನನ್ನು ಕಾಡಿತು.

ಮನೆಗೆ ಹೋಗುತ್ತಲೇ ಎದೆಗೇರಿಸಿಕೊಂಡ ಕವಚ, ಪೋಷಾಕು, ಮುಖಕ್ಕೆ ಬಳಿದುಕೊಂಡ ಬಣ್ಣವನ್ನು ತೆಗೆಯುತ್ತಲೇ ಸಾಮಾನ್ಯ ಹೆಂಗಸಿನಂತೆ ಎರಡೂ ಬದಿಗೂ ಕೈವರೆಸಿ ಚಿಟ್ಟುಬಿದ್ದು ರಟ್ಟಾದ ನೈಟಿ ತೊಟ್ಟು, ಜೋಲುವ ಎದೆ ಹೊತ್ತು ನಾಳೆಯ ಅಡುಗೆಗೇನೆಂದು ಬೀನ್ಸು, ಬಟಾಟೆ

